ಮರಗಳ ಮೌಲ್ಯ ಪರಿಷ್ಕರಣೆಯ ಬಗ್ಗೆ

2175 (2716)

ಶ್ರೀ ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸಾಗುವಳಿ ಚೀಟಿ ಕೊಡುವಾಗ ನಿರ್ಧರಿಸಿದ ಮರಗಳ ಮೌಲ್ಯವನ್ನು ಪರಿಷ್ಕರಿಸುವ ಬಗೆ ಚಾಲ್ತಿ ಕಾನೂನಿಗೆ ಸರ್ಕಾರ ತಿದ್ದುಪಡಿಯನ್ನು ತಂದಿದೆಯೇ?

ಆ) ಹಾಗಿದ್ದಲ್ಲಿ ಎಂದು ತಿದ್ದುಪಡಿಯನ್ನು ತರಲಾಗಿದೆ. (ವಿವರಗಳನ್ನು ನೀಡಿರಿ)

ಇ) ತಿದ್ದುಪಡಿಯನ್ನು ತರದೆ ಇರುವಾಗ ಅರಣ್ಯಾಧಿಕಾರಿಗಳು ಈ ಬಗ್ಗೆ ಬೆದರಿಸಿ ಹಣ ವಸೂಲಿ ಮಾಡಿರುವ ಬಗ್ಗೆ ಯಾವುದೇ ಆರೋಪಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಸರ್ಕಾರದ ಆದೇಶ ನೀಡಿದೆ.

ಆ) ಈ ಬಗ್ಗೆ ಸರ್ಕಾರದ ಆದೇಶ ಪತ್ರ ಸಂಖ್ಯೆ: ಎಎಫ್‌ಡಿ 18 ಎಫ್‌ಎಡಿ 71 ದಿನಾಂಕ: 1-2-1971ರಲ್ಲಿ ಆದೇಶ ನೀಡಿದ್ದು, ಅದರಂತೆ ಸಾಗುವಳಿ ಚೀಟಿ ಕೊಡುವ ಸಮಯದಲ್ಲಿ ನಿರ್ಧರಿಸಿದ ಹಾಗೂ ಮರ ಕಡಿಯಲು ಪರವಾನಿಗೆ ಕೊಡುವ ಸಮಯದಲ್ಲಿನ ಮರಗಳ ಘನ ಪ್ರಮಾಣಗಳ ವ್ಯತ್ಯಾಸದ ಪ್ರಮಾಣಕ್ಕೆ ಹಿಂದೆ ಚಾಲ್ತಿಯಲ್ಲಿದ್ದ ಮರದ ಬೆಲೆಯನ್ನು ವಸೂಲು ಮಾಡಲು ಆದೇಶವಾಗಿದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಮೈಸೂರಿನ ಕುಕ್ಕರಹಳ್ಳಿ ಕೆರೆ ಮತ್ತು ಲಿಂಗಾಂಬುಧೀ ಕೆರೆಗಳನ್ನು ಪ್ರೇಕ್ಷಣೀಯ ಸ್ಥಳವನ್ನಾಗಿಸುವ ಕುರಿತು

2176 (2703)